“ಅಯ್ಯೋ, ಈಗಾಗಲೇ ಅವಳ ಮಗ–ಸೊಸೆ ಅವಳೇನೋ ನನಗೆ ತನ್ನ ಆಸ್ತಿನೆಲ್ಲಾ ಬಾಚಿ ಕೊಡ್ತಿದಾಳೆಂದು ಅಳತಾ ಕೂತಿದ್ದಾರೆ. ಇಲ್ಲಿಗೆ ಕರೆದುಕೊಂಡು ಬಂದರೆ, ನಾನೇನೋ ಅವಳ ದುಡ್ಡೂ, ಬಂಗಾರದ ಸಲುವಾಗಿ ಇಲ್ಲಿ ಇಟ್ಟುಕೊಂಡಿದ್ದೇನೆ ಅಂತಾರೆ. ಹಾಗೆ ನೋಡಿದ್ರೆ, ಅವಳೇ ನನ್ನನ್ನು ‘ತಾಯಿಯಿಲ್ಲದ ಮಗಳು’ ಎಂದು ಸಾರಿದ್ದು. ನಿಜ ಹೇಳಿಬಿಟ್ಟರೆ ಹೇಗೆ? ಯಾಕೋ ಗೊತ್ತಿಲ್ಲ, ಅವಳನ್ನ ನೋಯಿಸೋಕೆ ನನಗೆ ಮನಸ್ಸಾಗಲ್ಲ… ಅವಳೇ ಸಾಕಿ ಬೆಳೆಸಿದಳಲ್ಲ ನನ್ನ.”

“ಹಾಗಂತ ದಿನಕ್ಕೊಬ್ಬ ಸಂತೋಷ್ ಬಂದು ನಿನ್ನ ಸತಾಯಿಸಿದ್ರೆ ಸುಮ್ನೇ ಇರ್ತೀಯಾ ಹೇಗೆ? ಅದೇನೂ ನಡಿಯಲ್ಲ” ಎಂದಳು ಸ್ನೇಹ.

ಸಂತೋಷ್‌ನ ಮಾತಿಗೆ ನನಗೇನೂ ಅಳು ಬರಲಿಲ್ಲ.

ಇಂಥಾ ವಿಷಯಗಳಿಗೆ ನನ್ನ ಕಣ್ಣೀರು ಈಗ ಸ್ಪಂದಿಸುವುದಿಲ್ಲ. ಚಿಕ್ಕಂದಿನಲ್ಲಿ ತುಂಬಾ ಅತ್ತಿದ್ದೆ. ಬಹುಶಃ ಈ ಜೀವನಕ್ಕೆ ಸಾಕಾಗುವಷ್ಟು ಅತ್ತುಬಿಟ್ಟಿದ್ದೇನೇನೋ. ಆ ಬಳಿಕ ಅಳುವನ್ನು ತಡೆದುಕೊಳ್ಳಲು ತುಂಬಾ ಕಷ್ಟಪಟ್ಟೆ. ಎಷ್ಟೋ ಅಮೂಲ್ಯವಾದ, ಉದ್ವೇಗಭರಿತ, ಭಾವನಾತ್ಮಕ ವಿಷಯಗಳನ್ನು ಬಿಟ್ಟರೆ ಮತ್ತಾವುದೂ ಕಣ್ಣೀರಿಗೆ ಅರ್ಹವಲ್ಲವೆಂದು ಈಗೀಗ ಅರಿತುಕೊಂಡಿದ್ದೇನೆ. ಹಾಗಾಗಿ, ‘ನಿಮ್ಮ ಬೆಲೆಯನ್ನು ಕಾಪಾಡಿಕೊಳ್ಳಿ’ ಎಂದು ನನ್ನ ಪ್ರೀತಿಯ ಕಣ್ಣೀರ ಬಂಧುಗಳಿಗೆ ಬೇಡಿಕೊಂಡೆ. ಈಗೀಗಲೇ ಅವು ನನ್ನ ಮಾತು ಕೇಳುತ್ತಿವೆ. ಅಷ್ಟಕ್ಕೂ, ದಮಯಂತಿಗೆ ಒಂದು ಕಪ್ಪು ಚುಕ್ಕಿ ಬರೆದು, ಅದನ್ನು ನನಗೂ ಅಂಟಿಸಿ, ನಮ್ಮ ಮೇಲೆ ಅಸಹ್ಯವನ್ನೋ, ಅನುಗ್ರಹವನ್ನೋ ತೋರಲಿಕ್ಕೆ ಇವರಾರು?

ಸ್ನೇಹಳನ್ನು ದೇವರು ನನಗಾಗಿಯೇ ಹುಟ್ಟಿಸಿದನೇನೋ ಎಂಬಂತೆ ಅವಳು ನನ್ನ ಕ್ಲಾಸ್‌ಮೇಟ್ ಆದಳು. ಆ ಬಳಿಕ ನನ್ನ ಕೊಲೀಗ್ ಆದಳು. ಇಬ್ಬರೂ ಸೇರಿ ಒಂದು ಅಪಾರ್ಟ್‌ಮೆಂಟ್ ತೆಗೆದುಕೊಂಡ ಮೇಲಿಂದ ನನ್ನ ಫ್ರೆಂಡ್, ಫಿಲಾಸಫರ್, ಗೈಡ್ ಎಲ್ಲವೂ ಆದಳು. ಅಣ್ಣನ ಬಳಿಕ ಅವಳೇ ನನ್ನ ಆತ್ಮಬಂಧು. ಅವಳೊಂದು ಝರಿ. ನನ್ನ ಸುದೀರ್ಘ ಮೌನವನ್ನು ಕರಗಿಸಿದಳು. ಒಳಗೊಳಗೆ ಮಡಚಿ ಹೋಗಿದ್ದ ನನ್ನನ್ನು, ಸಪಾಟು ಮಾಡಿದಳು. ನಗುವುದನ್ನು ಕಲಿಸಿದಳು. ನನಗೂ ಹಾಡಲು ಬರುತ್ತದೆಂದು ನೆನಪು ಮಾಡಿಸಿದಳು. ಪುಸ್ತಕ ಓದುವ ಗೀಳು ಹಚ್ಚಿದಳು.

ಸ್ನೇಹ ಬ್ಯೂಟಿಷಿಯನ್ನಿಗೆ ತಲೆ ಕೊಟ್ಟು ಕೂತಿದ್ದಳು. ನಾನೂ ಸಹ ಕಣ್ಣು ಮುಚ್ಚಿ ಕೂತಿದ್ದೇನೆ. ನನ್ನ ಮನಃಪಟಲದ ಮೇಲೆ ಕಪ್ಪು–ಬಿಳುಪಿನ ಜೀವನ ಚಿತ್ರಗಳು.

ಸೌಂದರ್ಯಳ ಮನೆಯಲ್ಲಿ ಸಂಗೀತ ಪಾಠವನ್ನು ಮುಗಿಸಿಕೊಂಡು ಬಂದು ಮನೆ ತಲುಪಿದ ಆ ಅಸುರ ಸಂಧ್ಯೆಯ ವೇಳೆ, ಜಗುಲಿಯಲ್ಲಿ ದೀಪ ಉರಿಯುತ್ತಿರಲಿಲ್ಲ. ಮುಸುಕಿಯೂ ಮುಸುಕದಂಥಾ ಕತ್ತಲಿನಲ್ಲಿ ಅಪ್ಪ ಫೇಮು ಕುರ್ಚಿಯಲ್ಲಿ ಕೆಂಡಕಾರುತ್ತಾ ಕೂತಿದ್ದ. ಅಪ್ಪನ ಕೈಯಲ್ಲೊಂದು ಕಾಗದವಿತ್ತು. ಅಣ್ಣ ಕಂಬಕ್ಕೊರಗಿ ನಿಂತು ಅಳುತ್ತಿದ್ದ. ಏನಾಗಿದೆ ಎಂದು ಅಮ್ಮನನ್ನು ಕೇಳೋಣವೆಂದು ಒಳಗೆ ಹೋದೆ. ಒಳಗಿನ ಕೋಣೆಗಳೆಲ್ಲವೂ ಕತ್ತಲು. ಅಡುಗೆಮನೆಯಲ್ಲೂ ಕತ್ತಲೇ.

“ಅಮ್ಮ ಎಲ್ಲಿಗೆ ಹೋದಳು ಅಪ್ಪಾ?” ಅಂದರೆ ಹೇಳಲಿಲ್ಲ. ಕಾಗದವನ್ನು ಕೈಲಾದಷ್ಟು ತುಂಡಾಗಿಸಿ, ಕುಪ್ಪೆ ಹಾಕಿ, ಕಡ್ಡಿ ಕೊರೆದ. ಅಣ್ಣ ನನ್ನನ್ನು ತಬ್ಬಿಕೊಂಡು ಅತ್ತರೆ, ನಾನೂ ಅತ್ತೆ. ಅಮ್ಮ ಎಷ್ಟಕ್ಕೂ ಬರಲಿಲ್ಲ. ಯಾರೂ ಅಡುಗೆ ಮಾಡಲಿಲ್ಲ. ನಾವು ಅತ್ತೂ, ಅತ್ತೂ ಮಲಗಿದೆವು. ಬೆಳಕು ಹರಿಯುವ ಹೊತ್ತಿಗೆ ಅಡುಗೆಮನೆಯಲ್ಲಿ ಅತ್ತೆ ಪ್ರತ್ಯಕ್ಷವಾದಳು. ಅವಳೆಂದರೆ ನನಗೆ ಅಷ್ಟಕಷ್ಟೇ.

“ನಮ್ಮಮ್ಮ ಎಲ್ಲಿಗೆ ಹೋದಳು?” ಕೇಳಿದೆ.

“ಸುಡುಗಾಡಿಗೆ” ಎಂದಳವಳು.

ನನ್ನನ್ನು ಸ್ಕೂಲಿಗೆ ಹೋಗೆಂದು ಅಪ್ಪ ಕೋಪಿಸಿಕೊಂಡು ಹೇಳಿದ. ಅಪ್ಪನೆಂದರೆ ಭಯವಾದ್ದರಿಂದ ಹೋದೆ. ಸಂಜೆ ಮನೆಗೆ ಮರಳುವ ಹೊತ್ತಿಗೆ ಅಮ್ಮನಿದ್ದರೆ ಚೆನ್ನಾಗಿರುವುದು ಎಂದುಕೊಂಡೇ